**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ದಿನಾಂಕ: 26.08.2014**

**ದಿನಾಂಕ 22.08.2014ರ ಶುಕ್ರವಾರದಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆದ "ರಾಷ್ಟ್ರೀಯ ಸೇವಾ ಯೋಜನೆ" (ಎನ್.ಎಸ್.ಎಸ್)ಯ ಪ್ರಥಮ ಸಲಹಾ ಸಮಿತಿ ಸಭೆಯ ನಡಾವಳಿ**

ಸಭೆಯಲ್ಲಿ ಹಾಜರಿದ್ದವರು:

1. ಕುಲಪತಿಗಳು(ಪ್ರ),
2. ಕುಲಸಚಿವರು,
3. ಅರುಣ ಪೂಜಾರ,
4. ರಾಮಚಂದ್ರರಾವ್ ಕಾಳೆ,
5. ಪ್ರೊ.ಸಿ.ವಿ. ವೆಂಕಟಾಚಲ,
6. ಟಿ.ತಿಮ್ಮೇಶ್,
7. ಪ್ರೊ.ವಿ.ಗಿರೀಶ್ ಚಂದ್ರ,
8. ಡಾ.ಬಿ. ಗೋವಿಂದ
9. ವಿದುಷಿ.ಅನುಪಮಾ. ಬಿ
10. ಹರೀಕೃಷ್ಣ . ಎ,
11. ವಿದ್ವಾನ್. ಎಸ್.ಬಿ.ಕಾಳನಗೌಡರ,
12. ಡಾ.ಎಂ.ಎ. ಆಳ್ವಾರ್,
13. ವಿದ್ವಾನ್. ಶಿವರಾಮೇಗೌಡ
14. ವಿದ್ವಾನ್.ರೇಣುಕಾರಾಧ್ಯ,
15. ವಿದ್ವಾನ್.ಪಿ.ಆರ್.ಪಾಗೋಜಿ
16. ಡಾ. ಸಂತೋಷ ಸು. ಹಾನಗಲ್ಲ,

ಗೈರು ಹಾಜರಾದವರು:

* ದಾಖಲಾತಿ ಪುಸ್ತಕದಲ್ಲಿ ಇದ್ದಂತೆ.

ರಾಷ್ಟ್ರೀಯ ಸೇವಾ ಯೋಜನೆ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಪ್ರೊ. ಶ್ರೀನಿವಾಸ ವರಖೇಡಿ, ಕುಲಪತಿಗಳು (ಪ್ರಭಾರ) ಹಾಗೂ ಸಭೆಯ ಪ್ರಧಾನ ಕಾರ್ಯದರ್ಶಿಗಳಾಗಿ ಪ್ರೊ. ಎಂ. ಕೆ. ಶ್ರೀಧರ್, ಕುಲಸಚಿವರು ವಹಿಸಿದ್ದರು. **"ರಾಷ್ಟ್ರೀಯ ಸೇವಾ ಯೋಜನೆ"** ಯ ಕಾರ್ಯಕ್ರಮ ಸಂಯೋಜಕರಾದ ಡಾ.ಸಂತೋಷ ಸು. ಹಾನಗಲ್ಲ, ಉಪ ನಿರ್ದೇಶಕರು, (ಪ್ರಸಾರಾಂಗ) ಉಪಸ್ಥಿತರಿದ್ದರು. ಮಾನ್ಯ ಕುಲಸಚಿವರು ಮೊದಲು

ಆಗಮಿಸಿದ್ದ ಎಲ್ಲಾ ಸದಸ್ಯರನ್ನೂ, ಹಾಗೂ ಅತಿಥಿಗಳನ್ನು ಸ್ವಾಗತಿಸಿ ಅವರುಗಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಟ್ಟರು. ಸಭೆಯಲ್ಲಿ ಚರ್ಚಿತವಾಗಬೇಕಾದ ವಿಷಯಗಳನ್ನು ಕಾರ್ಯಕ್ರಮ ಸಂಯೋಜಕರು ತಿಳಿಸಿದರು.

**ಚರ್ಚಿತವಾದ ವಿಷಯಗಳು ಇಂತಿವೆ:**

1. **ವಿಷಯ:** ನಮ್ಮ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರಾರಂಭಿಸುವ ಕುರಿತು.
   **ಟಿಪ್ಪಣಿ:** ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಎನ್.ಎಸ್.ಎಸ್. ಕಛೇರಿಯ ಅಧಿಕಾರಿಗಳ ಸಲಹೆ, ಸೂಚನೆಯ ಮೇರೆಗೆ ಹಾಗೂ ಕುಲಪತಿಗಳ ಮತ್ತು ಕುಲಸಚಿವರ ಮಾರ್ಗದರ್ಶನ ನೀಡಿ ಈ ಯೋಜನೆಯನ್ನು ಪ್ರಾರಂಭಿಸಿ ಯಶಸ್ವಿಗೊಳಿಸಲು ಕಾರಣೀಕರ್ತರಾದ ಈ ಎಲ್ಲ ಮಹಾನಿಯರಿಗೆ ಧನ್ಯವಾದಗಳು.
2. **ವಿಷಯ**: 2014–15ನೇ ಸಾಲಿನ ವಾರ್ಷಿಕ ಆಯವ್ಯಯ ಕುರಿತು.
   **ಟಿಪ್ಪಣಿ:** 2014–15ನೇ ಸಾಲಿನ ವಾರ್ಷಿಕ ಆಯವ್ಯಯ ಮಂಡಿಸಿ ಸಭೆಯ ಅನುಮೋದನೆ ಯನ್ನು ಪಡೆಯಲಾಯಿತು.

I. **Regular Activity** -1000 Students X Rs 250= **250000.00**

**Break up Expenditure to the annual Budget**

| | | | |
|---|---|---|---|
| 1. | Administration Expenditure 1000X 30= | | **30000.00** |
| | a. PCO Tour | = | 10000.00 |
| | b. Office Stationer | = | 5000.00 |
| | c. Office Assistant | = | 5000.00 |
| | d. PCO Mobile Expenditure | = | 3600.00 |
| | e. | | |
| 2. | Badge and Diary | 1000X30= | **30000.00** |
| 3. | Programme Officers Stipend 400X12months=4800X10= | | **48000.00** |
| 4. | Remaining Amount sent to 10 units | = | **142000.00** |

II. **Special Camp** of 7 or 10 days500students X450.00 = **225000.00**
(This Amount Will be Sent to All Units)

3. **ವಿಷಯಃ–** ಬ್ಯಾಂಕ್ ಖಾತೆಗಳನ್ನು ತೆರೆಯುವ ಕುರಿತು.

**ಟಿಪ್ಪಣಿ:** ವಿಶ್ವವಿದ್ಯಾಲಯ ಮಟ್ಟದಲ್ಲಿ **"ರಾಷ್ಟ್ರೀಯ ಸೇವಾ ಯೋಜನೆ"**ಯ ಹಣದ ವಹಿವಾಟಿಗಾಗಿ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು ಹಾಗೂ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳ ಜಂಟಿ ಬ್ಯಾಂಕ್ ಖಾತೆಯನ್ನು ತೆರೆಯಲು ಮತ್ತು ಕಾಲೇಜು ಮಟ್ಟದಲ್ಲಿ ಪ್ರಾಚಾರ್ಯರು ಹಾಗೂ ಎನ್.ಎಸ್.ಎಸ್. ಅಧಿಕಾರಿಗಳು ಜಂಟಿ ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮೋದನೆ ಪಡೆಯಲಾಯಿತು.

4. **"ರಾಷ್ಟ್ರೀಯ ಸೇವಾ ಯೋಜನೆ"** ಗೆ ಸೇರಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹ ನೀಡುವ ಬಗೆಗೆ

**ಟಿಪ್ಪಣಿ:** **"ರಾಷ್ಟ್ರೀಯ ಸೇವಾ ಯೋಜನೆ"**ಗೆ ಹೆಚ್ಚು ವಿದ್ಯಾರ್ಥಿಗಳು ಪ್ರೋತ್ಸಾಹಿಸಲು ವಿದ್ಯಾರ್ಥಿಗಳಿಗೆ ಒಂದು ವರ್ಷಕ್ಕೆ ಸರ್ಟಿಫಿಕೇಟ್ ನೀಡುವುದು. ಎರಡು ವರ್ಷಗಳನ್ನು ಪೂರೈಸಿದವರಿಗೆ ಡಿಪ್ಲೋಮಾ ಪದವಿ ನೀಡುವುದು.

5. ಸಾಹಸ ಮನೋಭಾವವನ್ನು ಯುವಜನರಲ್ಲಿ ಹೆಚ್ಚಿಸಬೇಕು.

**ಟಿಪ್ಪಣಿ:** ತೆಪ್ಪ ನೆಡೆಸುವುದು, ಬೆಟ್ಟಗುಡ್ಡಗಳಲ್ಲಿ ಚಾರಣ, ರಿವರ್ ರ್‍ಯಾಫ್ಟಿಂಗ್, ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ಅತ್ಯಾವಶ್ಯವಾದ ವಿಷಯಗಳ ಬಗ್ಗೆ ನುರಿತ ತಜ್ಞರಿಂದ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳುವುದು.

6. **ವಿಷಯಃ–** ಸಂಸ್ಕೃತ ವಿಶ್ವವಿದ್ಯಾಲಯವಾದುದರಿಂದ ಯುವಜನರಲ್ಲಿ ನೈತಿಕತೆ ಗುಣಗಳ ಮಹತ್ವ.

**ಟಿಪ್ಪಣಿ:** ಇತ್ತೀಚಿನ ಸಾಮಾಜಿಕ ಸ್ಥಿತಿಗತಿಗಳನ್ನು ಮನದಲ್ಲಿಟ್ಟುಕೊಂಡು ಸರ್ಕಾರಿ ಅಧಿಕಾರಿಗಳಾದ ಶ್ರೀ ಅರುಣ್ ಪೂಜಾರ್ ರವರು ಬೇರೆಲ್ಲಾ ವಿಶ್ವವಿದ್ಯಾಲಯಗಳಂತೆ ಶ್ರಮದಾನ, ಗಿಡ ನೆಡುವುದು, ರಕ್ತದಾನ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ ಯುವಜನತೆಯಲ್ಲಿ ನೈತಿಕತೆ, ಸಮಾಜದಲ್ಲಿ ತಮ್ಮ ಗುರುತರವಾದ ಜವಾಬ್ದಾರಿಗಳನ್ನು ಅರಿತು ನಿಭಾಯಿಸುವ ನಿಟ್ಟಿನಲ್ಲಿ **"ಸಂಸ್ಕೃತ ಸಂಸ್ಕೃತಿ"** ಎಂಬ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘೋಷಣೆಗೆ ತಕ್ಕಂತೆ ಕಾರ್ಯನಿರ್ವಹಿಸುವುದು.

ಸಂಸ್ಕೃತ ಭಾಷೆಯನ್ನು ಜನ ಸಾಮಾನ್ಯರ ಬಳಿಗೆ ಒಯ್ಯುವುದು, ಹತ್ತು ದಿನಗಳ ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ಆಯೋಜಿಸುವುದು.

7. **ವಿಷಯಃ**–ಸ್ತ್ರೀಯರ ಮೇಲಿನ ದೌರ್ಜನ್ಯಗಳ ತಡೆ

**ಟಿಪ್ಪಣಿ:** – ಹೆಣ್ಣು ಮಕ್ಕಳ ಭ್ರೂಣಹತ್ಯೆ, ವರದಕ್ಷಿಣೆ ಕಿರುಕುಳ, ಅತ್ಯಾಚಾರದಂತಹ ಸಾಮಾಜಿಕ ವಿಕೃತಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿರುವ ಕಾನೂನು ಕಾಯಿದೆಗಳ ಪರಿಚಯವನ್ನು ಅರಿವನ್ನು ನೀಡುವುದು.

8. **ವಿಷಯಃ**– ಮಿನಿ ಗ್ರಂಥಾಲಯ ಯೋಜನೆ

**ಟಿಪ್ಪಣಿ:**–ಪ್ರತಿಯೊಂದು ದತ್ತು ಗ್ರಾಮ ಪಂಚಾಯಿತಿಗಳ ಸಹಕಾರದೊಂದಿಗೆ ಮಿನಿ ಗ್ರಂಥಾಲಯಗಳನ್ನು ಸ್ಥಾಪಿಸುವುದು.

9. **ವಿಷಯಃ** ಎನ್.ಎಸ್.ಎಸ್ ಹೊಂದಿರುವ ಜಿಲ್ಲೆಗಳ ಚಾರಿತ್ರಿಕ ಮಾಹಿತಿಗಳನ್ನು ತಿಳಿಸಿಕೊಡುವುದು

**ಟಿಪ್ಪಣಿ:**– ಕರ್ನಾಟಕ ಪ್ರಾಚ್ಯಸಂಶೋಧನಾ ಇಲಾಖೆಯವರ ನೆರವಿನೊಂದಿಗೆ ಆಯಾ ಪ್ರದೇಶಗಳಲ್ಲಿ ದೊರಕಿರುವ ಸಂಸ್ಕೃತ ಶಾಸನಗಳನ್ನು ಸ್ಥಳೀಯ ಭಾಷೆಯಲ್ಲಿ ಅಲ್ಲಿಯ ಜನರಿಗೆ ತಿಳಿಸಿ ಕೊಡುವುದು. ಆ ಸ್ಥಳಗಳ ಚಾರಿತ್ರಿಕಹಿನ್ನೆಲೆ, ಇತಿಹಾಸ ಪ್ರಸಿದ್ದ ಪ್ರವಾಸಿಕೇಂದ್ರಗಳ ಸಂಪೂರ್ಣ ಮಾಹಿತಿಗಳನ್ನು ನೀಡಲು ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು. ಈ ರೀತಿಯಿಂದ ಸ್ಥಳೀಯ ಐತಿಹಾಸಿಕ ಕಟ್ಟಡ, ಶಾಸನಗಳ ರಕ್ಷಿಸುವಲ್ಲಿ ಕೆಲವು ಸುಧಾರಣೆಗಳನ್ನು ತರಬಹುದಾಗಿದೆ.

10. **ವಿಷಯಃ**:– ಎನ್.ಎಸ್.ಎಸ್. ಅಧಿಕಾರಿಗಳಿಗೆ ಓರಿಯಂಟೇಷನಲ್ ಕೋರ್ಸ್

**ಟಿಪ್ಪಣಿ:**–ಕಾಲೇಜುಗಳಲ್ಲಿನ ಎನ್.ಎಸ್.ಎಸ್. ಅಧಿಕಾರಿಗಳಿಗೆ ರಾಜ್ಯ ಎನ್.ಎಸ್.ಎಸ್. ಸೆಲ್ವತಿಯಿಂದ ಓರಿಯಂಟೇಷನಲ್ ಕೋರ್ಸ್ ಏರ್ಪಡಿಸುವುದು.

11. **ವಿಷಯಃ**:– ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಮೂರು ಪ್ರಮುಖ ಪುಸ್ತಕಗಳ ಪರಿಚಯ

**ಟಿಪ್ಪಣಿ:**– ಮೊದಲಿಗೆ **"ಮೋಗ್ಲಿ ಕಥೆ"** , ನಂತರ **"ಸ್ಕೌಟಿಂಗ್ ಫಾರ್ ಬಾಯ್ಸ್,"** ಕೊನೆಯಲ್ಲಿ **"ರೋರಿಂಗ್ ಟು ಸಕ್ಸಸ್"** ಎಂಬ ಮೂರು ಪ್ರಮುಖ ಪುಸ್ತಕಗಳ ಪರಿಚಯವನ್ನು ನೀಡುವುದು. ವ್ಯಕ್ತಿತ್ವ ವಿಕಸನದ ವಿವಿಧ ಹಂತಗಳನ್ನು ಕಥೆಗಳ ಮೂಲಕ ತಿಳಿಸಿಕೊಡುವುದು.

**12. ವಿಷಯಃ** ತಳಮೂಲ, ದೇಸೀಯ ಬುಡಕಟ್ಟು ಜನಾಂಗಗಳಿಗೆ ಸಂಸ್ಕೃತ ಭಾಷೆಯ ಪರಿಚಯ

**ಟಿಪ್ಪಣಿ:** ಆಯಾ ಪ್ರದೇಶಗಳಲ್ಲಿನ ಬುಡಕಟ್ಟು ಸಮುದಾಯಗಳಿಗೆ ಸಂಸ್ಕೃತ ಭಾಷೆಯ ಪರಿಚಯ.

**13. ವಿಷಯಃ** ರಕ್ತದಾನ, ನೇತ್ರ ದಾನ ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸುವುದು.

**ಟಿಪ್ಪಣಿ:** ರಕ್ತದಾನ, ನೇತ್ರದಾನದಂತೆ ಅಂಗಾಂಗದಾನ ಹಾಗೂ ದೇಹದಾನಗಳ ಮಹತ್ವ ಹಾಗೂ ಅದರ ಅಗತ್ಯತೆಯನ್ನು ತಜ್ಞರಿಂದ ತಿಳಿಸಿಕೊಡುವುದು.

**14. ವಿಷಯಃ** ಕೊಳಚೆ ಪ್ರದೇಶ, ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವುದು

**ಟಿಪ್ಪಣಿ :** ಕೊಳಚೆ ಪ್ರದೇಶ, ಗ್ರಾಮಗಳನ್ನು ದತ್ತು ತೆಗೆದುಕೊಂಡು ಅವುಗಳನ್ನು ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಾಕಿಕೊಳ್ಳುವುದು.

**ಕಾರ್ಯಕ್ರಮ ಸಂಯೋಜನಾಧಿಕಾರಿಗಳು** **ಕುಲಸಚಿವರು**

**ಪ್ರತಿಗಳು:**

1. ಕುಲಪತಿಗಳ ಆಪ್ತಶಾಖೆ.
2. ಕುಲಸಚಿವರ ಆಪ್ತಶಾಖೆ,
3. ಎನ್.ಎಸ್.ಎಸ್ ಸಲಹಾ ಸಮಿತಿಯ ಸದಸ್ಯರುಗಳಿಗೆ.
4. ಕಛೇರಿಪ್ರತಿ.